— ! ಕನ್ನಡಮ್ಮ ! —
ಶುಕ್ರವಾರ, 17- ಅಕ್ಟೋಬರ್, 2014
ಪುಟ ಸಂಖ್ಯೆ - 03

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ಡಾ.ಹೆಚ್.ಮಹೇಶಪ್ಪ ಅವರಿಗೆ ತಾಂತ್ರಿಕ ಶಿಕ್ಷಣ ಶಿಲ್ಪಿ ಪ್ರಶಸ್ತಿ




ಬೆಳಗಾವಿ,ಅ.16: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ: ಹೆಚ್.ಮಹೇಶಪ್ಪ ಅವರು ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ದಾವಣಗೆರೆಯ ಸ್ಥಳೀಯ ಕೇಂದ್ರದ ಆಶ್ರಯದಲ್ಲಿ ನಗರದ ಯುನಿವರ್ಸಿಟಿ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರುಗಿದ 47ನೇ ಇಂಜಿನಿಯರ್ ಕಾರ್ಯಕ್ರಮದಲ್ಲಿ "ತಾಂತ್ರಿಕ ಶಿಕ್ಷಣ ಶಿಲ್ಪಿ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿಯನ್ನು ಸ್ವೀಕರಿಸಿದ ನಂತರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ:ಹೆಚ್. ಮಹೇಶಪ್ಪನವರು ಮಾತನಾಡಿ, ಸಾಧಸಬೇಕೆಂಬ ಹಂಬಲ; ಜಯಶೀಲರಾಗಬೇಕೆಂಬ ಬದ್ಧತೆ, ಒಳ್ಳೆಯ ನಡತೆ; ಸಕಾರಾತ್ಮಕ ನಂಬಿಕೆ, ದೃಡತೆಯ ಶಕ್ತಿಯ ಜೊತೆಗೆ ವೈಶಿಷ್ಟ ಕಠಿಣ ದೃಢ ಪರಿಶ್ರಮದಿಂದ ಪ್ರಯತ್ನ ಮಾಡಿದಲ್ಲಿ ಪ್ರತಿಯೊಬ್ಬರು ಯಶಸ್ಸನ್ನು ಸಾಧಿಸಲು ಸಾಧ್ಯವೆಂದು ನುಡಿದರು.

ಸಮಾರಂಭದಲ್ಲಿ ಯುನಿವರ್ಸಿಟಿ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾದ ಡಾ: ಶಿವಪ್ರಸಾದ ಬಿ ದಂಡಗಿ ದಾವಣಗೆರೆಯ ದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಕೇಂದ್ರದ ಅಧ್ಯಕ್ಷರಾದ ಡಾ. ಡಿ.ಅಬ್ದುಲ್ ಬುಡೇನ್, ರೇಖಾ ಪದಕಿ, ಚನ್ನವೀರಪ್ಪ, ಬಿ. ಎನ್.ವೀರಪ್ಪ, ಡಾ:ಶೇಖರಪ್ಪ ಮಲ್ಲೂರ್ ಹಾಗೂ ಪ್ರೊ. ಎ.ವಿ.ಮಾಲಿನಿ, ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಕಾರ್ಯದರ್ಶಿ ಡಾ. ಎ.ಎಸ್.ಅಪ್ರಮೇಯ ಇದ್ದರು. K-3

— ! ಸಂಯುಕ್ತ ಕರ್ನಾಟಕ ! —
ಶುಕ್ರವಾರ, 17 ಅಕ್ಟೋಬರ್, 2014
ಪುಟ ಸಂಖ್ಯೆ - 05

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ವಿಟಿಯು ಕುಲಪತಿಗೆ ತಾಂತ್ರಿಕ ಶಿಕ್ಷಣ ಶಿಲ್ಪಿ ಪ್ರಶಸ್ತಿ ಪ್ರದಾನ

**ಬೆಳಗಾವಿ, ಅ. 16:** ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸ್ಥಳೀಯ ಕೇಂದ್ರದ ಆಶ್ರಯದಲ್ಲಿ ನಗರದ ಯುನಿವರ್ಸಿಟಿ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರುಗಿದಇಂಜಿನಿಯರುಗಳ ದಿನಾಚರಣೆ ಹಾಗೂ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ರವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಹೆಚ್.ಮಹೇಶಪ್ಪ ಅವರು ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ ತಾಂತ್ರಿಕ ಶಿಕ್ಷಣ ಶಿಲ್ಪಿ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿಯನ್ನು ಸ್ವೀಕರಿಸಿದ ನಂತರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಹೆಚ್.ಮಹೇಶಪ್ಪನವರು ಮಾತನಾಡಿ, ಸಾಧಸಬೇಕೆಂಬ ಹಂಬಲ; ಜಯಶೀಲರಾಗಬೇಕೆಂಬ ಬದ್ಧತೆ, ಒಳ್ಳೆಯ ನಡತೆ; ಸಕಾರತ್ಮಾಕ ನಂಬಿಕೆ, ದೃಡತೆಯ ಶಕ್ತಿಯ ಜೊತೆಗೆ ವೈಶಿಷ್ಟ ಕಠಿಣ ದೃಢ ಪರಿಶ್ರಮದಿಂದ ಪ್ರಯತ್ನ ಮಾಡಿದಲ್ಲಿ ಪ್ರತಿಯೊಬ್ಬರು ಯಶಸ್ಸನ್ನು ಸಾಧಿಸಲು




**ಕುಲಪತಿ ಡಾ. ಹೆಚ್.ಮಹೇಶಪ್ಪ ಅವರಿಗೆ ತಾಂತ್ರಿಕ ಶಿಕ್ಷಣ ಶಿಲ್ಪಿ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.**

ಸಾಧ್ಯವೆಂದು ನುಡಿದರು.

ಉನ್ನತ ಆಲೋಚನೆಗಳಿಂದ, ಅತ್ಯೂನ್ನತ ಆದರ್ಶಗಳಿಂದ, ಅಪಾರ ಇಚ್ಛಾಶಕ್ತಿಯಿಂದ ಹಾಗೂ ಮಹಾತ್ಕಾರ್ಯಗಳಿಂದ ಸರ್.ಎಂ. ವಿಶ್ವೇಶ್ವರಯ್ಯನವರು ದೇಶ ಕಂಡ ಒಬ್ಬ ಶ್ರೇಷ್ಠ ಇಂಜಿನಿಯರ್ ಆಗುವುದರ ಜೊತೆಗೆ ಯುವ ಜನತೆಗೆ ಆದರ್ಶಪ್ರಾಯರಾಗಿದ್ದರೆಂದು ನುಡಿದರು. ಜೊತೆಗೆ ಯುವ ಇಂಜಿನಿಯರು ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಳ್ಳಬೇಕೆಂದರು.

ಯುನಿವರ್ಸಿಟಿ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ: ಶಿವಪ್ರಸಾದ ಬಿ ದಂಡಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದಾವಣಗೆರೆಯ, ದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಕೇಂದ್ರದ ಅಧ್ಯಕ್ಷರಾದ ಡಾ. ಡಿ.ಅಬ್ದುಲ್ ಬುಡೇನ್ ಅಭಿನಂದನೆ ನುಡಿಗಳನ್ನಾಡುತ್ತ ಡಾ: ಹೆಚ್.ಮಹೇಶಪ್ಪ ಯುನಿವರ್ಸಿಟಿ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ಕುಲಪಗಿಗಳಾದ ಮೇಲೆ ಈ ಕಾಲೇಜಿನ ಅಭಿವೃದ್ಧಿ 100 ಕೋಟಿಗೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಅಡಿಪಾಯ ಹಾಕಿರುತ್ತಾರೆಂದು ತಿಳಿಸಿದರು. ಡಾ. ಹೆಚ್.ಮಹೇಶಪ್ಪ ಇವರಿಗೆ ಈ ಕಾಲೇಜಿನ ಬಗ್ಗೆ ಇರುವ ಅಪಾರ ಗೌರವ, ಕಾಳಜಿ ಬಗ್ಗೆ ಪ್ರಶಂಶಿಸಿದರು ಅಲ್ಲದೆ ಶ್ವವಿದ್ಯಾನಿಲಯದ ಮಟ್ಟದಲ್ಲಿಯೂ ಸಹ ಅಪಾರ ಅಭಿವೃದ್ಧಿಕಾರ್ಯಗಳ, ಜೊತೆಗೆ ಪರೀಕ್ಷಾ ಪದ್ಧತಿಯಲ್ಲಿಯ ಬದಲಾವಣೆಯು ಜಾಗತಿಕ ಮಟ್ಟದಲ್ಲಿ ಹೆಸರನ್ನು ಮಾಡಿದೆ ಎಂದು ಹೆಮ್ಮೆಯಿಂದ ನುಡಿದರು. ವಿತಾವಿ ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಇಡಿದು ಅವರ ಅಂತಿಮ ಸೆಮಿಸ್ಟರ್ ಫಲಿತಾಂಶ ಬರುವವರೆಗೂ ಡಿಜಿಟಲ್ ತಂತ್ರಜ್ಞಾನ ಬಳಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. SK-5

ದಾವಣಗೆರೆಯ ದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ನಿಕಟಪೂರ್ವ ಅಧ್ಯಕ್ಷರಾದ ಪಿ.ನಾಗರಾಜ್ ರವರು ಕುಲಪತಿಗಳಾದ ಡಾ. ಹೆಚ್. ಮಹೇಶಪ್ಪನವರನ್ನುದ್ದೇಶಿಸಿ ತಯಾರಿಸಿದ ನುಡಿಮುತ್ತುಗಳನ್ನು ಓದಿ ಅವರ ಕಾರ್ಯ ವೈಕರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆ.ಎಸ್.ವೀರೇಶ ಸರ್.ಎಂ.ವಿಶ್ವೇಶ್ವರಯ್ಯ ನವರ 'ಜೀವನ ಚರಿತ್ರೆ ಕುರಿತು ಮಾತನಾಡಿದರು, ಎ. ಎನ್. ಶೇಖರವರು ದಾವಣಗೆರೆಯ ದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಕುರಿತು ವಿಷಯ ತಿಳಿಸಿದರು, ಹೆಚ್. ಎನ್. ವೀರಭದ್ರಪ್ಪನವರು, ದ ಇನ್ಸಿಟ್ಯೂಟ್ ಆಫ್ ಇಂಜಿನಿಯರ್ಸ್ ಹೊಸ ಕಟ್ಟಡದ ಕುರಿತು ವಿಷಯ ತಿಳಿಸಿದರು.

ಡಾ. ಅಬ್ದುಲ್ ಬುಡಾನ್ ಅಧ್ಯಕ್ಷತೆ ವಹಿಸಿದ್ದರು. ರೇಖಾಪದಕಿ ಪ್ರಾರ್ಥಿಸಿದರು, ಚನ್ನವೀರಪ್ಪ ಸ್ವಾಗತಿಸಿದರು. ಬಿ.ಎನ್.ವೀರಪ್ಪ ಅತಿಥಿಗಳನ್ನುಪರಿಚಯಿಸಿದರು.ಡಾ:ಶೇಖರಪ್ಪ ಮಲ್ಲೂರ, ಪ್ರೊಫೆಸರ್ ಎ.ವಿ.ಮಾಲಿನಿ, ಕಾರ್ಯಕ್ರಮ ನಿರೂಪಿಸಿದರು. ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಕಾರ್ಯದರ್ಶಿ ಡಾ: ಎ.ಎಸ್.ಅಪ್ರಮೇಯ ವಂದಿಸಿದರು.

— ! ಹೊಸ ದಿಗಂತ ! —
ಶುಕ್ರವಾರ, 17 ಅಕ್ಟೋಬರ್, 2014
ಪುಟ ಸಂಖ್ಯೆ-10

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ಕುಲಪತಿ ಡಾ.ಎಚ್.ಮಹೇಶಪ್ಪ ಅವರಿಗೆ ಪ್ರಶಸ್ತಿ




ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಚ್. ಮಹೇಶಪ್ಪ ಅವರು ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಪರಿಗಣಿಸಿ ಅವರಿಗೆ ತಾಂತ್ರಿಕ ಶಿಕ್ಷಣ ಶಿಲ್ಪಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ದಿ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ದಾವಣಗೆರೆಯ ಆಶ್ರಯದಲ್ಲಿ ಯುನಿವರ್ಸಿಟಿ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಜರುಗಿದ 47ನೇ ಎಂಜಿನಿಯರ್ಸ್ ದಿನಾಚರಣೆ ಹಾಗೂ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ 154ನೇ ಜನ್ಮ ದಿನಾಚರಣೆಯಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮಹೇಶಪ್ಪ, ಸಾಧಿಸಬೇಕೆಂಬ ಹಂಬಲ; ಜಯಶೀಲರಾಗಬೇಕೆಂಬ ಬದ್ಧತೆ, ಒಳ್ಳೆಯ ನಡತೆ; ಸಕಾರಾತ್ಮಾಕ ನಂಬಿಕೆ, ದೃಢತೆಯ ಶಕ್ತಿಯ ಜೊತೆಗೆ ವೈಶಿಷ್ಟ ಕಠಿಣ ದೃಢ ಪರಿಶ್ರಮದಿಂದ ಪ್ರಯತ್ನ ಮಾಡಿದಲ್ಲಿ ಪ್ರತಿಯೊಬ್ಬರೂ ಯಶಸ್ಸು ಸಾಧಿಸಲು ಸಾಧ್ಯವೆಂದರು.

ಉನ್ನತ ಆಲೋಚನೆ, ಅತ್ಯುನ್ನತ ಆದರ್ಶ, ಅಪಾರ ಇಚ್ಛಾಶಕ್ತಿ ಹಾಗೂ ಮಹತ್ಕಾರ್ಯಗಳಿಂದ ಸರ್.ಎಂ.ವಿಶ್ವೇಶ್ವರಯ್ಯನವರು ದೇಶ ಕಂಡ ಒಬ್ಬ ಶ್ರೇಷ್ಠ ಎಂಜಿನಿಯರ್ ಆಗುವುದರ ಜೊತೆಗೆ ಯುವ ಜನತೆಗೆ ಆದರ್ಶಪ್ರಯರಾಗಿದ್ದಾರೆ. ಯುವ ಎಂಜಿನಿಯರುಗಳು ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಯುನಿವರ್ಸಿಟಿ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಶಿವಪ್ರಸಾದ ದಂಡಗಿ, ಇಂದಿನ ಆಧುನಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ನಾನಾ ನವೀನ ಮಾದರಿಯ ಹಾಗೂ ಅತ್ಯಾಕರ್ಷಕ ತಾಂತ್ರಿಕ ಕೌಶಲ್ಯಗಳನ್ನು ಮೈಗೂಡಿಸಿಕೊಂಡು ಹೊರ ಬರುತ್ತಿರುವ ಉತ್ಪಾದನೆಗಳ ಜೊತೆ ಜೊತೆಗೆ ಅವುಗಳು ಪರಿಸರ ಪೂರಕವಾಗಿರಬೇಕೆಂದು ಹೇಳಿದರು.

ದಾವಣಗೆರೆಯ ದಿ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಅಧ್ಯಕ್ಷ ಡಾ. ಡಿ.ಅಬ್ದುಲ್ ಬುಡೇನ್, ಡಾ. ಮಹೇಶಪ್ಪ ಅವರು ಯುನಿವರ್ಸಿಟಿ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯಾಗಿದ್ದು ಕುಲಪತಿಗಳಾಗಿರುವುದು ಈ ಕಾಲೇಜಿಗೆ ಹೆಮ್ಮೆಯಾಗಿದೆ. ಕುಲಪತಿಗಳಾದ ಮೇಲೆ ಈ ಕಾಲೇಜಿನ ಅಭಿವೃದ್ಧಿಗೆ 100 ಕೋಟಿಗೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಅಡಿಪಾಯ ಹಾಕಿದ್ದಾರೆ ಎಂದು ತಿಳಿಸಿದರು.

ವಿಟಿಯು ಜಾರಿಗೆ ತಂದಿರುವ ಪರೀಕ್ಷಾ ಪದ್ಧತಿಯಲ್ಲಿಯ ಬದಲಾವಣೆ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದೆ. ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಅವರ ಅಂತಿಮ ಸೆಮಿಸ್ಟರ್ ಫಲಿತಾಂಶ ಬರುವವರೆಗೂ ಡಿಜಿಟಲ್ ತಂತ್ರಜ್ಞಾನ ಬಳಸುತ್ತಿರುವುದು ಏಕೈಕ ವಿಶ್ವವಿದ್ಯಾಲಯವಾಗಿದೆ ಎಂದರು.

ಪಿ.ನಾಗರಾಜ್, ಕೆ.ಎಸ್.ವೀರೇಶ, ಡಾ. ಅಬ್ದುಲ್ ಬುಡಾನ್, ಮುಂತಾದವರು ಉಪಸ್ಥಿತರಿದ್ದರು. HD-10

— ! The New Indian Express ! —
Friday, October 17, 2014
Page No-02



VTU V-C H Maheshappa being felicitated with the Architect of Technical Education award at Davangere, recently | EXPRESS PHOTO

# 'Engineers Key For Global Progress'

**Express News Service**

**Belgaum:** Visvesvaraya Technological University Vice-Chancellor H Maheshappa was presented with the Architect of Technical Education award on the occasion of the 47th Engineers Day and 154th birth anniversary of Bharat Ratna Sir M Visvesvaraya.

The programme was jointly organised by the Institution of Engineers, Davangere local centre and ISTE students' chapter of University BDT College of Engineering Davangere at Swamy Vivekananda Conference Hall of UBDTCE recently.

Maheshappa said engineers are key figures in progress of the world. In order to become competent engineers who can take on global challenges, they should be aware about the nature of the growing challenges and opportunities, he added. Maheshappa proposed the construction of a lecture hall complex, auditorium, R&D centre, laboratories etc worth ₹110 crore on the campus at Davangere.

UBDTCE principal Shivaprasad Dandagi said there is no end to development and the engineering progress. Upgradation is a continuous process which is led by engineers after taking into account the prevailing socio-politico-economic conditions of the country, he said. K S Veeresh, A N Shekhar and H N Veerbhadrappa spoke. Chennaveerappa welcomed, B N Veerappa introduced the guests, S B Mallur and Prof A V Malini compered and Aprameya thanked. TNIE-2